ಶ್ರೀ ಅಜಯಕುಮಾರ್ ಸರ್‌ನಾಯಕ್ : ಸನ್ಮಾನ್ಯ ಉಪಾಧ್ಯಕ್ಷರೆ,ಮಾನ್ಯ ಸದಸ್ಯರು ಹೇಳಿದಂಥ ಕೆಲವೊಂದು ದೃಷ್ಟಾಂತಗಳು ಇವೆ. ಕೆಲವೊಂದು ಸ್ಟೇಡಿಯಂಗಳಿಗೆ ನಾವು ಹಣ ಬಿಡುಗಡೆ ಮಾಡಿದ್ದೇವೆ. ಆದರೆ ಅಲ್ಲಿ ಜಾಗದ ತೊಂದರೆ ಇರುವುದರಿಂದ ಬಿಡುಗಡೆ ಮಾಡಿದ ಹಣ ಉಪಯೋಗ ಆಗಿಲ್ಲ. ಎಲ್ಲಿ ಈಗಾಗಲೇ ಸ್ಟೇಡಿಯಂಗಳ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ ಅಲ್ಲಿಗೆ ಈ ಹಣವನ್ನು ಉಪಯೋಗ ಮಾಡಲಿಕ್ಕೆ ನಿರ್ದಿಷ್ಟವಾದ ಆದೇಶವನ್ನು ಕೂಡ ಕೊಟ್ಟಿದ್ದೇವೆ. ನಂತರ ಮಾನ್ಯ ಸದಸ್ಯರಿಗೆ ಇನ್ನೊಂದು ವಿಷಯ ತಿಳಿಸುವುದೇನೆಂದರೆ ಎಲ್ಲೆಲ್ಲಿ ಸ್ಟೇಡಿಯಂಗಳ ಕೆಲಸ ಇನ್‌ಕಂಪ್ಲೀಟ್ ಆಗಿವೆ, ಲೋಕಸಭಾ ಸದಸ್ಯರಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಅವರವರ ಕ್ಷೇತ್ರದ ಅಭಿವೃದ್ಧಿ ಕೆಲಸಗಳನ್ನು ಮಾಡಿಸುವುದಕ್ಕೆ ಕೊಟ್ಟಿರುತ್ತಾರೆ. ನಾನು ಎಲ್ಲಾ ಲೋಕಸಭಾ ಸದಸ್ಯರಿಗೆ ಪತ್ರವನ್ನು ಸಹ ಬರೆದಿದ್ದೇನೆ. ಕೆಲವು ಕಡೆ ಲೋಕಸಭಾ ಸದಸ್ಯರು ಈ ಸ್ಟೇಡಿಯಂಗಳ ಕೆಲಸಕ್ಕೆ ದುಡ್ಡನ್ನು ಸಹ ಕೊಟ್ಟಿದ್ದಾರೆ. ಅವರು ಏನು ಹಣ ಕೊಟ್ಟಿದ್ದಾರೆ ಅದರಿಂದ ಸ್ಟೇಡಿಯಂಗಳ ಕೆಲಸವನ್ನು ಮುಗಿಸಲಿಕ್ಕೆ ಕೂಡ ಸಾಧ್ಯವಾಗಿದೆ. ಆದ್ದರಿಂದ ಈ ಸ್ಟೇಡಿಯಂಗಳ ಕೆಲಸವನ್ನು ಸಾಧ್ಯವಾದಷ್ಟು ತೀವ್ರವಾಗಿ ಮುಗಿಸಲಿಕ್ಕೆ ನಾವು ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ.

ರಾಜ್ಯ ಸರ್ಕಾರದ ಆರ್ಥಿಕ ನೀತಿ ಕುರಿತು

186 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಮಾನ್ಯ ಉಪಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಆರ್ಥಿಕ ನೀತಿಯನ್ನು ರೂಪಿಸಿದೆಯೇ?

ಆ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಇದ್ದಲ್ಲಿ ಇದರ ಸ್ಥೂಲ ರೂಪು ರೇಷೆಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು) :

ಅ) (ಆ) ಮತ್ತು ಇ) ಹೌದು. ಒಂದು ರಾಜ್ಯ ಸರ್ಕಾರದ ಆರ್ಥಿಕ ನೀತಿಯು ಅದರ ತೆರಿಗೆ, ಸಾಲ ಮತ್ತು ವೆಚ್ಚದ ನೀತಿಗಳಲ್ಲಿ ಪ್ರತಿಬಿಂಬಿತವಾಗುತ್ತಿದೆ. ಇವುಗಳನ್ನು (ಅಂದರೆ ತೆರಿಗೆ, ಸಾಲ ಮತ್ತು ವೆಚ್ಚದ ನೀತಿಗಳನ್ನು) ಉಪ ಮುಖ್ಯಮಂತ್ರಿಯವರ ಆಯವ್ಯಯ ಭಾಷಣ1997-98ರಲ್ಲಿ ವಿವರಿಸಲಾಗಿದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, whether economic policy has been formulated by the government? ಅದಕ್ಕೆ ಉತ್ತರ ಏನು ಕೊಟ್ಟಿದಾದರೆಂದರೆ ` Yes. The economic policy of the state government is reflected in the taxation, debt and expenditure policy. ಉಪ ಮುಖ್ಯಮಂತ್ರಿಗಳ ಬಗ್ಗೆ ನನಗೆ ಅಪಾರವಾದ ಪ್ರೀತಿ, ವಿಶ್ವಾಸ, ಗೌರವ ಇದೆ. ಬಜೆಟ್ ಕೂಡ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಐಓಟಿ.

I am asking the economic policy, not taxation. What is the meaning of economic policy? To improve the standard of living, they should frame an economic policy. ತಾವು ಒಂದು ಬಡ್ಜೆಟ್ ಇಟ್ಟುಕೊಂಡು ತೆರಿಗೆ ಹೆಚ್ಚು ಮಾಡಿದ್ದೇವೆಂದರೆ, is it a policy for another 5 years? No. ಅವುರ ಕೊಟ್ಟಿರತಕ್ಕಂಥ ಉತ್ತರವೇ ಸರಿಯಿಲ್ಲ. What is the policy that the government has adopted? ಈಗ ಒಂದು ಪ್ರಶ್ನೆ ಕೇಳುತ್ತೇನೆ, ಎಕನಾಮಿಕ್ ಪಾಲಿಸಿ ಎಂದರೆ they should have a....

ಉಪಾಧ್ಯಕ್ಷರು : ರಾಜೇಂದ್ರನ್‌ರವರೆ, ನೀವು ಪ್ರಶ್ನೆ ಕೇಳಿ ಅದಕ್ಕೆ ನೀವೇ ಉತ್ತರ ಕೊಡುತ್ತೀರೋ ಅಥವಾ ಸಂಬಂಧಪಟ್ಟ ಸಚಿವರಿಂದ ಉತ್ತರ ಕೇಳುತ್ತೀರೋ? ನೀವು ಕೇಳಿದ ಪ್ರಶ್ನೆಗೆ ಸಚಿವರಿಂದ ಉತ್ತರ ಕೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನಮ್ಮ ಸರ್ಕಾರದ ಆರ್ಥಿಕ ನೀತಿ ಏನು ಎಂದು ಕೇಳಿದ್ದಾರೆ. ನಮ್ಮ ಆರ್ಥಿಕ ನೀತಿಯಲ್ಲ ತೆರಿಗೆ ನೀತಿ, ನಮ್ಮ ಸಾಲದ ನೀತಿ, ನಮ್ಮ ವೆಚ್ಚದ ನೀತಿ, ಇದೆಲ್ಲ ಕೂಡ ಒಳಗೊಂಡಿರತಕ್ಕಂಥದೆ ಆರ್ಥಿಕ ನೀತಿಯಾಗಿದೆ, ಈ ರಾಜ್ಯದ ಅಭಿವೃದ್ಧಿಗೆ ರಾಜ್ಯದ ಆರ್ಥಿಕ ಬೆಳವಣಿಗೆಗೆ ಪೂರಕವಾದಂಥ ನೀತಿಯೆಂದು ಉತ್ತರದಲ್ಲಿ ತಿಳಿಸಿದ್ದೇನೆ. ಅವರಿಗೆ ಇನ್ನು ಏನು ಬೇಕೆಂದು ಕೇಳುವುದಾದರೆ, ನಾನು ನನ್ನ 1997-98ರ ಬಜೆಟ್‌ನಲ್ಲಿ ಸ್ಪಷ್ಟವಾಗಿ ನಮ್ಮ [illegible]ವ ಏನು ಎನ್ನತಕ್ಕಂಥದ್ದನ್ನೂ ಕೂಡ ಸ್ಪಷ್ಟಪಡಿಸಿದ್ದೇವೆ. ಇನ್ನು ಏನಾದರೂ ಬೇಕಾದರೆ ಕೇಳಲಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ನಾನು ಪಾಲಿಸಿ ಬಗ್ಗೆ ಏತಕ್ಕೆ ಕೇಳಿದ್ದು ಎಂದರೆ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಎಸ್‌ಸಿ/ ಎಸ್‌ಟಿ ಕಾನ್ಸ್ಟಿಟ್ಯೂಯೆನ್ಸಿ ಇದೆಯೋ ಅಲ್ಲೆಲ್ಲಾ ಸರ್ಕಾರಿ ಕಾಲೇಜುಗಳು ಇರಬೇಕು. You must say, `With 5 years, we are going to complete'. It is called the economic policy. ಈಗ ಎಜುಕೇಷನ್ ಬಗ್ಗೆ ಏತಕ್ಕೆ ಮಾತನಾಡುತ್ತಿದ್ದೇನೆಂದರೆ ನಮ್ಮ ರಿಸರ್ವೇಷನ್ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ, ನನಗೆ 36 ವರ್ಷ ವಯಸ್ಸು ಆಗಿದೆ, The Governemnt college is not there. Only aided college is there. The land is given by the BGML. The building is given by the BGML. ಇಷ್ಟು ಎಲ್ಲಾ ಕೊಟ್ಟು, private man is enjoying it. ಹೀಗೆ ಇದ್ದರೆ ಸರ್ಕಾರ ಏನು ಪಾಲಿಸಿ ಇಟ್ಟುಕೊಂಡಿದ್ದಾರೆ ಎಂಬುದನ್ನು ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಅವರು ಪ್ರಶ್ನೆ ಏಕೆ ಕೇಳುತ್ತಿದ್ದಾರೆಂದರೆ ಅವರ ಕ್ಷೇತ್ರಕ್ಕೆ ಫಸ್ಟ್ ಗ್ರೇಡ್ ಕಾಲೇಜು ಬೇಕು. ಅದಕ್ಕಾಗಿ ಸುತ್ತಿ ಬಳಸಿ ಇವೆಲ್ಲವನ್ನೂ ಕೇಳುತ್ತಿದ್ದಾರೆ. ಇದರ ಬಗ್ಗೆ ಬಹಳ ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರ ಗಂಭೀರವಾಗಿ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆಂದು ಅವರಿಗೆ ತಮ್ಮ ಮೂಲಕ ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್ ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಮಾಡಿಕೊಡುತ್ತದೆಂದು ಹೇಳಿದರೆ ಸಾಕು.

ಉಪಾಧ್ಯಕ್ಷರು : ಅವರು ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಅವರು ಪರಿಶೀಲನೆ ಮಾಡುತ್ತೇವೆಂದು ಮಾತ್ರ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅದು ಎರಡೂ ಒಂದೇ ಆನ್ಸರ್.

ದೇವದುರ್ಗವನ್ನು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸುವುದು.

188 - ಶ್ರೀಮತಿ ಬಿ.ಟಿ. ಲಲಿತಾನಾಯಕ (ದೇವದುರ್ಗ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ತಾಣಗಳನ್ನು ಪ್ರವಾಸಿ ಕೇಂದ್ರಗಳಾಗಿ ಮಾಡಲಾಗಿದೆ?

ಆ) ದೇವದುರ್ಗದಲ್ಲಿ ಇತಿಹಾಸ ಪ್ರಸಿದ್ಧವಾದ ಮುಕ್ತಾಯಕ್ಕನ ಬೆಟ್ಟ,,ಪ್ರಭುದೇವರ ಗುಹೆ, ಅಣಿಮಲ್ಲೇಶ್ವರ ಸ್ಥಳಗಳಿದ್ದು ಇವುಗಳನ್ನು ಪ್ರವಾಸಿ ಕೇಂದ್ರಗಳಾಗಿ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀಮತಿ. ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಒಟ್ಟು 257 ಸ್ಥಳಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗೆ ಖಾತ್ರಿಯಾದ ಸ್ಥಳಗಳೆಂದು ವಿಶೇಷವಾಗಿ 'ಸಿ' ಗುಂಪಿನಲ್ಲಿ ಗುರುತಿಸಲಾಗಿದೆ.

ಆ) ದೇವದುರ್ಗದಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಬಿ' ಗುಂಪಿನಲ್ಲಿ ಗುರುತಿ ಸಲಾಗಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 257 ಸ್ಥಳಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗೆ ಖಾತ್ರಿಯಾದ ಸ್ಥಳಗಳೆಂದು ನಿಗದಿ ಪಡಿಸಿದ್ದೇವೆಂದು ಹೇಳಿದ್ದಾರೆ. ಹಾಗಾಗಿ ಅದನ್ನು 'ಸಿ' ಗುಂಪಿಗೆ ಸೇರಿದ್ದೇವೆಂದು ಹೇಳಿದ್ದಾರೆ. ದೇವದುರ್ಗವನ್ನು 'ಬಿ' ಗುಂಪಿಗೆ ಸೇರಿಸಿದ್ದೇವೆಂದು ಹೇಳಿದ್ದಾರೆ. ನಾನು ಏನು ಅಂದುಕೊಂಡಿದ್ದೇನೆ ಎಂದರೆ ಇಂಗ್ಲೀಷ್‌ನಲ್ಲಿ 'ಬಿ' ಆದಮೇಲೆ 'ಸಿ' ಅಂದರೆ 'ಸಿ'ಗೆ ಖಾತ್ರಿ ಪಡಿಸುವುದಾದರೆ 'ಬಿ'ಏಕೆ ಬಿಟ್ಟಿರಿ. 'ಬಿ' ಎಂದರೆ ಏನು? 'ಸಿ' ಎಂದರೆ ಏನು? ದೇವದುರ್ಗ ಏಕೆ 'ಬಿ' ಗುಂಪಿಗೆ ಬಂತು? ದಯವಿಟ್ಟು ಇದನ್ನು ಹೇಳಿ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 'ಎ' ಎಂದು ಇದ್ದರೆ ಮೊದಲು,